ಕರ್ನಾಟಕ ಸರ್ಕಾರ

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ,**
**ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು-23**

ಸಂಖ್ಯೆ:ಆಡಳಿತ/53/2021-22

ದಿನಾಂಕ:25.05.2022

## ಸುತ್ತೋಲೆ

ವಿಷಯ:- ಇಲಾಖೆಯ ಗ್ರೂಪ್ "ಸಿ" ಮತ್ತು ಗ್ರೂಫ್ "ಡಿ" ನೌಕರರ 20, 25 ಮತ್ತು 30 ವರ್ಷಗಳ ಹೆಚ್ಚುವರಿ ವೇತನ ಬಡ್ತಿಯನ್ನು ಮಂಜೂರು ಮಾಡುವಲ್ಲಿ ಆಗುವ ವಿಳಂಬವನ್ನು ತಪ್ಪಿಸುವ ಬಗ್ಗೆ.

ಉಲ್ಲೇಖ:- ಮಾನ್ಯ ಆಯುಕ್ತರು, ಆರೋಗ್ಯ ಮತ್ತು ಕು.ಕ. ಸೇವೆಗಳು, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ 03.03.2022 ರಂದು ನಡೆದ ಸಭೆಯ ನಡವಳಿಗಳು.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 03-03-2022 ರಂದು ಮಾನ್ಯ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರ ಅಧ್ಯಕ್ಷತೆಯಲ್ಲಿ ಇಲಾಖೆಯ ಅಧಿಕಾರಿ/ ಸಿಬ್ಬಂದಿಗಳ ಕುಂದು ಕೊರತೆಗಳ ಬಗ್ಗೆ ಸಂಘದ ಪದಾಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಇಲಾಖೆಯ ಗ್ರೂಪ್ "ಸಿ" ಮತ್ತು "ಡಿ" ನೌಕರರ 20, 25 ಮತ್ತು 30 ವರ್ಷಗಳ ಹೆಚ್ಚುವರಿ ವೇತನ ಬಡ್ತಿಗಳನ್ನು ಮಂಜೂರು ಮಾಡುವಲ್ಲಿ ಆಗುತ್ತಿರುವ ವಿಳಂಬವನ್ನು ತಪ್ಪಿಸಲು ಪ್ರಸ್ತಾವನೆಯನ್ನು/ ಕಡತವನ್ನು ಡಿಪಿಎನ್/ ಡಿಪಿಜಿ/ ಸಿವಿಜಿ ವಿಭಾಗಗಳಿಗೆ ಕಳುಹಿಸದೆ ನೇರವಾಗಿ ಸಂಬಂಧಪಟ್ಟ ಶಾಖೆಗಳಲ್ಲಿ ಮಂಜೂರಾತಿ ನೀಡುವಂತೆ ನಿರ್ಣಯಿಸಲಾಗಿದೆ.

ಆದುದರಿಂದ, ಸದರಿ ಹೆಚ್ಚುವರಿ ವೇತನ ಬಡ್ತಿಗೆ ಸಂಬಂಧಿಸಿದಂತೆ ಪ್ರಸ್ತಾವನೆಗಳನ್ನು ಸಲ್ಲಿಸುವಾಗ ನೌಕರರ ವಿರುದ್ಧ ಇಲಾಖಾ ವಿಚಾರಣೆ, ಲೋಕಾಯುಕ್ತ ಪ್ರಕರಣ, ನ್ಯಾಯಲಯದ ಪ್ರಕರಣ, ಅನಧಿಕೃತ ಗೈರು ಹಾಜರಿ ಇತ್ಯಾದಿಗಳು ಇರುವ ಅಥವಾ ಇಲ್ಲದಿರುವ ಬಗ್ಗೆ ನೌಕರರಿಂದ ಸ್ವಯಂ ದೃಢೀಕರಣ ಪತ್ರವನ್ನು ಪಡೆದು ಈ ಪ್ರಮಾಣ ಪತ್ರವನ್ನು ನೌಕರರು ಕರ್ತವ್ಯ ನಿರ್ವಹಿಸುತ್ತಿರುವ ಸಂಸ್ಥೆಯ ಹಂತದಲ್ಲಿ ಕೂಲಕುಂಷವಾಗಿ ಪರಿಶೀಲಿಸಿ, ದೃಢಿಕರಿಸಿ ಪ್ರಮಾಣ ಪತ್ರ, ಅವಶ್ಯಕ ದಾಖಲೆಗಳು ಮತ್ತು ನಿಗಧಿತ ನಮೂನೆಗಳೊಂದಿಗೆ ಪ್ರಸ್ತಾವನೆಗಳನ್ನು ಸಂಬಂಧಪಟ್ಟ ನಿಯಂತ್ರಣಾಧಿಕಾರಿಗಳಿಗೆ ಸಲ್ಲಿಸಲು ಸೂಚಿಸಿದೆ. ಇಂತಹ ಪ್ರಸ್ತಾವನೆಗಳನ್ನು ಸಂಬಂಧಪಟ್ಟ ನಿಯಂತ್ರಣಾಧಿಕಾರಿಗಳು ತಮ್ಮ ಹಂತದಲ್ಲಿ ಪರಿಶೀಲಿಸಿ ಅರ್ಹ ಪ್ರಸ್ತಾವನೆಗಳನ್ನು ಸಂಬಂಧಪಟ್ಟ ವಿಭಾಗೀಯ ಜಂಟಿ ನಿರ್ದೇಶಕರಿಗೆ ಕಳುಹಿಸಲು ಹಾಗೂ ಬಿ.ಬಿ.ಎಂ.ಪಿ. ಸೇರಿದಂತೆ ವಿಭಾಗೀಯ ಜಂಟಿ ನಿರ್ದೇಶಕರು ಕಡತಗಳನ್ನು ನಿರ್ದೇಶನಾಲಯದ ಡಿಪಿಎನ್/ ಡಿಪಿಜಿ/ ಸಿವಿಜಿ ವಿಭಾಗಗಳಿಗೆ ಕಳುಹಿಸದೆ ತಮ್ಮ ಹಂತದಲ್ಲಿಯೇ ನಿಯಮಾನುಸಾರ ಪರಿಶೀಲಿಸಿ ಅನಗತ್ಯ ವಿಳಂಬ ಮಾಡದೇ ಮಂಜೂರಾತಿ ನೀಡುವಂತೆ ಈ ಮೂಲಕ ತಿಳಿಸಲಾಗಿದೆ.

ಹೆಚ್ಚುವರಿ ವೇತನ ಬಡ್ತಿಗಳನ್ನು ಮಂಜೂರು ಮಾಡುವಲ್ಲಿ ವಿಳಂಬವಾದಲ್ಲಿ, ಯಾವುದೇ ದೂರುಗಳು ಬಂದಲ್ಲಿ ಸಂಬಂಧಪಟ್ಟ ಅಧಿಕಾರಿ/ ನೌಕರರನ್ನು ಜವಬ್ದಾರರನ್ನಾಗಿಸಿ ಸೂಕ್ತ ಕ್ರಮವನ್ನು ಕೈಗೊಳ್ಳಲಾಗುವುದು.

ಮುಖ್ಯ ಆಡಳಿತಾಧಿಕಾರಿಗಳು,
ಆರೋಗ್ಯ ಮತ್ತು ಕು.ಕ. ಸೇವೆಗಳ ನಿರ್ದೇಶನಾಲಯ,
ಬೆಂಗಳೂರು.

ಇವರಿಗೆ.

1) ಎಲ್ಲಾ ವಿಭಾಗೀಯ ಸಹ ನಿರ್ದೇಶಕರುಗಳು, ಆರೋಗ್ಯ ಮತ್ತು ಕು.ಕ. ಸೇವೆಗಳು.
2) ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳು.
3) ಎಲ್ಲಾ ವೈದ್ಯಕೀಯ ಅಧೀಕ್ಷಕರುಗಳು/ ಜಿಲ್ಲಾ ಶಸ್ತ್ರಚಿಕಿತ್ಸಕರುಗಳು.
4) ಎಲ್ಲಾ ಆಡಳಿತ ವೈದ್ಯಾಧಿಕಾರಿಗಳು, ಪ್ರಾ.ಆ.ಕೇಂದ್ರ, ಸ.ಆ.ಕೇಂದ್ರ, ಸಾರ್ವಜನಿಕ ಆಸ್ಪತ್ರೆ.

ಪ್ರತಿಯನ್ನು ಮಾಹಿತಿಗಾಗಿ ಸಲ್ಲಿಸಿದೆ/ ರವಾನಿಸಿದೆ,

1) ಮಾನ್ಯ ಆಯುಕ್ತರ ಆಪ್ತ ಶಾಖೆಗೆ, ಆರೋಗ್ಯ ಮತ್ತು ಕು.ಕ. ಸೇವೆಗಳ ಆಯುಕ್ತಾಲಯ, ಬೆಂಗಳೂರು.
2) ನಿರ್ದೇಶಕರ ಆಪ್ತ ಶಾಖೆಗೆ, ಆರೋಗ್ಯ ಮತ್ತು ಕು.ಕ. ಸೇವೆಗಳ ನಿರ್ದೇಶನಾಲಯ, ಬೆಂಗಳೂರು.

...2

Scanned by CamScanner

3) ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. (ತಮ್ಮ ಅಧೀನದ ಎಲ್ಲಾ ಸರ್ಕಾರಿ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆಗಳಿಗೆ ಕಳಿಸಲು ತಿಳಿಸಲಾಗಿದೆ)
4) ಅಪರ ನಿರ್ದೇಶಕರು, ಉತ್ತರ ಕರ್ನಾಟಕ, ವಿಜಯಪುರ ಜಿಲ್ಲೆ.
5) ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಆರ್ಥಿಕ ಸಲಹೆಗಾರರು, ಆರೋಗ್ಯ ಮತ್ತು ಕು.ಕ. ಸೇವೆಗಳ ನಿರ್ದೇಶನಾಲಯ, ಬೆಂಗಳೂರು.
6) ಆಡಳಿತಾಧಿಕಾರಿಗಳು (ಸಾಮಾನ್ಯ/ಸಾರಿಗೆ/ಕು.ಕ), ಆರೋಗ್ಯ ಮತ್ತು ಕು.ಕ. ಸೇವೆಗಳ ನಿರ್ದೇಶನಾಲಯ, ಬೆಂಗಳೂರು.
7) ಸಹಾಯಕ ಆಡಳಿತಾಧಿಕಾರಿಗಳು, ಗಣಕಯಂತ್ರ ವಿಭಾಗ ಇವರಿಗೆ ಕಳುಹಿಸುತ್ತಾ, ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಿದೆ.
೮) ಆದೇಶದ ಪ್ರತಿ/ ಕಚೇರಿ ಪ್ರತಿ.

Scanned by CamScanner